# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2505/2022-23/ CYS-13

ಕಂಪನಿ ಕಾರ್ಯಾಲಯ,
ಕೃ.ರಾ. ವೃತ್ತ,
ಬೆಂಗಳೂರು-560 001.
ದಿನಾಂಕ: 29 OCT 2022

ಗೆ,

ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು / ಮುಖ್ಯ ಇಂಜಿನಿಯರ್(ವಿ.)/ಲೆಕ್ಕ ನಿಯಂತ್ರಣಾಧಿಕಾರಿಗಳು
ಎಲ್ಲಾ ಪ್ರಧಾನ ವ್ಯವಸ್ಥಾಪಕರು/ ಅಧೀಕ್ಷಕ ಇಂಜಿನಿಯರ್(ವಿ.)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು
ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು / ಕಾರ್ಯನಿರ್ವಾಹಕ ಇಂಜಿನಿಯರ್(ವಿ.)/ ಲೆಕ್ಕಾಧಿಕಾರಿಗಳು
ಬೆವಿಕಂ.

ಮಾನ್ಯರೇ,

<u>ವಿಷಯ</u>:- ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ದಿನಾಂಕ: 28.07.2022 ರಿಂದ ಜಾರಿಗೆ ಬರುವಂತೆ ಮಾಸಿಕ ಕನಿಷ್ಠ ವೇತನ ಪಾವತಿಯ ಬಗ್ಗೆ.

<u>ಉಲ್ಲೇಖ</u>:-
1. ಈ ಕಛೇರಿ ಸುತ್ತೋಲೆ ದಿನಾಂಕ: 30.10.2018, 04.12.2018, 28.12.2020, 09.09.2021, 02.07.2022, 07.09.2022.
2. ಈ ಕಛೇರಿ ಪತ್ರ ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾಸಂ)/ಬಿಸಿ-50/2505/2018-19/ಸಿವೈಸ್-24. ದಿನಾಂಕ: 30.10.2018
3. ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರ ಸುತ್ತೋಲೆ ಸಂಖ್ಯೆ: ಕಾಇ 105 ಎಲ್‌ಡಬ್ಲ್ಯೂಎ 2022, ದಿನಾಂಕ: 01.09.2022.
4. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ-14/526/2019-20, ದಿನಾಂಕ: 07.10.2022.

******

ಉಲ್ಲೇಖ (3) ರ ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರ ಸುತ್ತೋಲೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ದಿನಾಂಕ: 28.07.2022 ರಿಂದ ಜಾರಿಗೆ ಬರುವಂತೆ 2022-23 ನೇ ಸಾಲಿಗೆ ಮಾಸಿಕ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿರುತ್ತದೆ. ಅದರಂತೆ ಬೆವಿಕಂನಲ್ಲಿ ಹೊರ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ದಿನಾಂಕ: 28.07.2022 ರಿಂದ ಜಾರಿಗೆ ಬರುವಂತೆ ಮಾಸಿಕ ಕನಿಷ್ಠ ವೇತನವನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿರುತ್ತದೆ. ಹಾಗೂ ಹೊಸದಾಗಿ ಟೆಂಡರ್ ಕರೆಯುವಾಗ ಈ ಕೆಳಗೆ ತಿಳಿಸಿರುವ ಮಾಸಿಕ ಕನಿಷ್ಠ ವೇತನವನ್ನು ಪರಿಗಣಿಸುವಂತೆ ಸಹ ತಿಳಿಸಲಾಗಿದೆ.

| ಕ್ರ.ಸಂ | ಮಾನವ ಸೇವೆಗಳ ವಿವರ | ಬಿಬಿಎಂಪಿ ಮತ್ತು ಇತರೆ ನಗರ ಪಾಲಿಕೆಗಳು-(ವಿಡಿಎ ಒಳಗೊಂಡಂತೆ) Zone-1 | ಜಿಲ್ಲಾ ಕೇಂದ್ರ ಸ್ಥಾನದ ನಗರಗಳಿಗೆ (Zone-1 ರಲ್ಲಿರುವ ಸ್ಥಳಗಳನ್ನು ಹೊರತುಪಡಿಸಿ) -(ವಿಡಿಎ ಒಳಗೊಂಡಂತೆ) Zone-2 | ಇತರೆ ಕಾರ್ಯಸ್ಥಳಗಳು- -(ವಿಡಿಎ ಒಳಗೊಂಡಂತೆ) Zone-3 |
|---|---|---|---|---|
| 1 | ಡಾಟಾ ಎಂಟ್ರಿ ಆಪರೇಟರ್ | 17502.44 | 17054.72 | 16667.52 |
| 2 | ಕಛೇರಿ ಪರಿಚಾರಕ | 14913.02 | 14598.42 | 14283.82 |
| 3 | ವಾಹನ ಚಾಲಕರು | 16050.42 | 15687.42 | 15324.42 |

ಮುಂದುವರೆದು, ಬೆವಿಕಂನಲ್ಲಿ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ಏಜೆನ್ಸಿರವರು/ ಗುತ್ತಿಗೆದಾರರು ನಿಯಮಾನುಸಾರ ಸರಿಯಾಗಿ ಕಾಲಕಾಲಕ್ಕೆ ನಿಯಮಿತವಾಗಿ ಮಾಸಿಕ ಕನಿಷ್ಠ ವೇತನ, ಇಪಿಎಫ್, ಇಎಸ್ಐ ನ್ನು ಪಾವತಿಸುತ್ತಿರುವ ಬಗ್ಗೆ ಪರಿಶೀಲಿಸಿ, ನಿಯಮಿತವಾಗಿ ವೇತನ, ಇಪಿಎಫ್, ಇಎಸ್ಐನ್ನು ಪಾವತಿಸದೇ ನಿರ್ಲಕ್ಷ್ಯತೋರುವ ಏಜೆನ್ಸಿಯವರ/ ಗುತ್ತಿಗೆದಾರರ ವಿರುದ್ಧ ಕೂಡಲೇ ಕ್ರಮವಹಿಸುವಂತೆ ಈಗಾಗಲೇ ಉಲ್ಲೇಖ(1) ರ ಸುತ್ತೋಲೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಸಹ ಪಾಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಬೆವಿಕಂ.

ಪ್ರತಿ:

1. ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು (ತಾಂತ್ರಿಕ)/ ಮುಖ್ಯ ಪ್ರಧಾನ ವ್ಯವಸ್ಥಾಪಕರು (ಅಂ.ಪ)/ ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಉ.ಪ್ರ.ವ್ಯ(ಸಿ)/ ಸ.ಪ್ರವ್ಯ(ಸಿ-1)/ ಮುಖ್ಯ ಕಡತ.